ಮೂಲ ದಾವಾ ಸಂಖ್ಯೆ 3/2019

ಡಿ ಡಬ್ಲ್ಯೂ-1

**(ದಿನಾಂಕ 27.10.2025 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು.)**

**ಪಾಟೀ ಸವಾಲು ವಾದಿ ಪರ ಶ್ರೀ K.B.R. ವಕೀಲರಿಂದಃ-**

ಟಿ ಎಂ ಗುರುಬಸ್ಸಯ್ಯ ನನ್ನ ದತ್ತು ತಂದೆ ಅಂತಾ ಬರೆಸಿದ್ದೇನೆ ಎಂದರೆ ಸರಿ. ನಾನು ಟಿ ಎಂ ಗುರುಬಸ್ಸಯ್ಯ ರವರ ದತ್ತು ಪುತ್ರ ಅಂತಾ ತೋರಿಸಲು ನೋಂದಾದ ದಾಖಲೆ ಹಾಜರುಪಡಿಸಿಲ್ಲಾ ಎಂದರೆ ಸರಿ. ಶಾಲಾ ದಾಖಲೆ ಹಾಜರುಪಡಿಸಿರುತ್ತೇನೆ. ವೀರಯ್ಯ ಮತ್ತು ಕೊಟ್ರಯ್ಯನ ಹೆಣ್ಣಜ್ಜ ಕೊಟ್ರಪಯ್ಯ ಎಂದರೆ ಸರಿ. ಕೊಟ್ರಪಯ್ಯ 1965 ರಲ್ಲಿ ಮರಣ ಹೊಂದಿರತ್ತಾರೆ ಎಂದರೆ ಸರಿ. ಕೊಟ್ರಪಯ್ಯ ರವರಿಗೆ ದೇವಿರಮ್ಮ ಹೆಂಡತಿ ಎಂದರೆ ಸರಿ. ಸದರಿಯವರಿಗೆ ಇಬ್ಬರೆ ಹೆಣ್ಣು ಮಕ್ಕಳು ಎಂದರೆ ಸರಿ. ಚನ್ನವೀರಮ್ಮ ಮತ್ತು ಸೌಭಾಗ್ಯಮ್ಮ ಎಂದರೆ ಸರಿ. ವಾದಿಗಳ ತಾಯಿ ಚನ್ನವೀರಮ್ಮ ಎಂದರೆ ಸರಿ. ಸೌಭಾಗ್ಯಮ್ಮನಿಗೆ ಮಕ್ಕಳು ಇರಲಿಲ್ಲ ಎಂದರೆ ಸರಿ. ಸೌಭಾಗ್ಯಮ್ಮನನ್ನು ಕ್ಯಾರಕಟ್ಟಿ ಗ್ರಾಮದ ಟಿ ಎಂ ಗುರುಬಸ್ಸಯ್ಯ ರವರಿಗೆ ಕೊಟ್ಟು ವಿವಾಹ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿ. ನನ್ನ ಜನಕ ತಂದೆ ಮೃತ್ಯುಂಜಯ ಗುರುಬಸ್ಸಯ್ಯನ ತಮ್ಮ ಎಂದರೆ ಸರಿ. ನನ್ನ ತಂದೆಯ ತಂದೆ ಟಿ ಎಂ ಕೊಟ್ರಯ್ಯ ಎಂದರೆ ಸರಿ. ಕೊಟ್ರಯ್ಯನಿಗೆ ಚನ್ನಮ್ಮ ಹೆಂಡತಿ ಎಂದರೆ ಸರಿ. ಸದರಿಯವರಿಗೆ 8 ಜನ ಮಕ್ಕಳು ಎಂದರೆ ಸರಿ. ಶಂಭುಲಿಂಗಯ್ಯ, ಚನ್ನಬಸ್ಸಯ್ಯ, ಪ್ರಭುಲಿಂಗಯ್ಯ, ಜ್ಞಾನೇಶ್ವರಯ್ಯ, ಗುರುಬಸಯ್ಯ, ಮೃತ್ಯುಂಜಯ, ಗೌರಮ್ಮ ಹಾಗೂ ಗಂಗಮ್ಮ ಎಂದರೆ ಸರಿ. ಕೊಟ್ರಬಸ್ಸಮ್ಮ ಅಂತಾ ಇನ್ನೊಬ್ಬ ಮಗಳು ಇದ್ದಳು. ದಾವಾ ಆಸ್ತಿಗಳು ಮೊದಲಿಗೆ ವಾದಿಗಳ ಹೆಣ್ಣಜ್ಜ ಕೊಟ್ರಪಯ್ಯನಿಗೆ ಸೇರಿದ ಆಸ್ತಿ ಎಂದರೆ ಸರಿ. ಕೊಟ್ರಪಯ್ಯ ಹಂಪಯ್ಯನ ಮಗ ವೀರಯ್ಯ ಚನ್ನಬಸ್ಸಯ್ಯ ಇವರ ನಡುವೆ ದಿನಾಂಕ 10.02.1981 ದಾವಾ ಆಸ್ತಿಗಳು ಮತ್ತು ಇತರೆ ಆಸ್ತಿಗಳು ಪಾಲು ವಿಭಾಗ ಆಯಿತು

ಎಂದರೆ ಸರಿ. ಸದರಿ ಪಾಲು ವಿಭಾಗದಲ್ಲಿ ಸರ್ವೆ ನಂಬರ 13/ಹೆಚ್ 94 ಸೆಂಟ್ಸ್ ಸರ್ವೆ ನಂಬರ 128, ಸರ್ವೆ ನಂಬರ 67 ಎ ಸರ್ವೆ ನಂಬರ 68 ಎ ಸರ್ವೆ ನಂಬರ 70 ಒಟ್ಟು 4 ಎಕರೆ 26 ಸೆಂಟ್ಸ್ ಆಸ್ತಿ ಸರ್ವೆ ನಂಬರ 42 ಇ ಎಫ್ ಜಿ 68 ಸಂಟ್ಸ್, ಸರ್ವೆ ನಂಬರ 42 ಹೆಚ್ 72 ಸೆಂಟ್ಸ್ ಸರ್ವೆ ನಂಬರ **113/ಜಡ್** 11 ಸೆಟ್ಸ್ ಸರ್ವೆ ನಂಬರ 60/ಬಿ 1 ಎಕರೆ 51 ಸೆಂಟ್ಸ್, ಸರ್ವೆ ನಂಬರ 60 ಬಿ 1 ಎಕರೆ 51 ಸೆಂಟ್ಸ್ ಸರ್ವೆ ನಂಬರ 113 ವೈ 6 ಸೆಂಟ್ಸ್ ಹಾಗೂ ಒಂದು ಕ್ಯಾರೇಕಟ್ಟೆ ಗ್ರಾಮದಲ್ಲಿ ಇರುವ ಮನೆ ದೇವಿರಮ್ಮನ ಭಾಗಕ್ಕೆ ಬಂದಿತ್ತು ಎಂದರೆ ಸರಿಯಲ್ಲ. ಕೇವಲ ಸರ್ವೆ ನಂಬರ 42 ಹೆಚ್ ಬಂದಿರುವುದಿಲ್ಲಾ. ಚನ್ನವೀರಮ್ಮ ಮತ್ತು ಸೌಭಾಗ್ಯಮ್ಮ ದೇವಿರಮ್ಮನ ಭಾಗಕ್ಕೆ ಬಂದ ಆಸ್ತಿಗಳನ್ನು ಅವರೊಂದಿಗೆ ಇದ್ದುಕೊಂಡು ಜಂಟಿ ಆಗಿ ಅನುಭಸಿಕೊಂಡು ಬಂದಿರುತ್ತಾರೆ ಎಂದರೆ ಸರಿಯಲ್ಲ. ದೇವಿರಮ್ಮ ಗಂಡ ಮರಣ ಹೊಂದಿದ ನಂತರ ಚನ್ನಮ್ಮನ ಮನೆಯಲ್ಲಿ ಇದ್ದರು ಎಂದರೆ ಸರಿ. ಚನ್ನ ವೀರಮ್ಮನ ಮನೆಯಲ್ಲಿ ವಾಸವಾಗಿದ್ದ ಕಾರಣ ಚನ್ನವೀರಮ್ಮ ಮತ್ತು ಸೌಭಾಗ್ಯಮ್ಮ ದೇವಿರಮ್ಮ ಒಟ್ಟಾಗಿ ಅವರ ಆಸ್ತಿಗಳನ್ನು ಅನುಭವಿಸುತ್ತಿದ್ದರು ಎಂದರೆ ಸರಿಯಲ್ಲ. ಚನ್ನವೀರಮ್ಮ ಮತ್ತು ಸೌಭಾಗ್ಯಮ್ಮ ರವರ ವಿವಾಹವನ್ನು ದೇವಿರಮ್ಮ ಮಾಡಿರುತ್ತಾರೆ ಎಂದರೆ ಗೊತ್ತಿಲ್ಲಾ. ಮದುವೆಗೆ ಮುಂಚೆ ಚನ್ನವೀರಮ್ಮ ಮತ್ತು ಸೌಭಾಗ್ಯಮ್ಮ ದೇವಿರಮ್ಮನ ಒಂದೇ ಬಿ ಶೆಡ್ಯೂಲ್ ಐಟಂ ನಂಬರ 4 ಮನೆಯಲ್ಲಿ ವಾಸವಾಗಿದ್ದರು ಎಂದರೆ ಸರಿಯಲ್ಲ. ಗುರುಬಸ್ಸಯ್ಯ ಶಿಕ್ಷಕರಾಗಿ ಸೇವೆ ಸಲ್ಲಿಸುತ್ತಿದ್ದರು ಎಂದರೆ ಸರಿ. ಗುರುಬಸ್ಸಯ್ಯನ ಸೇವೆ ಇದ್ದ ಕಡೆಯಲೆಲ್ಲ ಗುರುಬಸ್ಸಯ್ಯ ಮತ್ತು ಸೌಭಾಗ್ಯಮ್ಮ ವಾಸವಾಗಿದ್ದರು ಎಂದರೆ ಸರಿ. ದೇವಿರಮ್ಮನ ಮಕ್ಕಳು ಚನ್ನವೀರಮ್ಮ ಮತ್ತು ಸೌಭಾಗ್ಯಮ್ಮ ದೇವಿರಮ್ಮನ ಪಾಲಿಗೆ ಬಂದ ಆಸ್ತಿಗಳನ್ನು ದಿನಾಂಕ 19.01.1984 ರಲ್ಲಿ

ನೋಂದಣಿ ಆಗದ ಪಾಲು ವಿಭಾಗ ಮಾಡಿಕೊಂಡರು ಎಂದರೆ ಸರಿ. ಸದರಿ ಪಾಲುವಿಭಾಗದಲ್ಲಿ ಎ ಶೆಡ್ಯೂಲ್ ಆಸ್ತಿಗಳು ಸೌಭಾಗ್ಯಮ್ಮನ ಪಾಲಿಗೆ ಬಂತು ಎಂದರೆ ಸರಿ. ಬಿ ಶೆಡ್ಯೂಲ್ ಆಸ್ತಿ ದೇವಿರಮ್ಮನ ಪಾಲಿಗೆ ಬಂತು ಎಂದರೆ ಸರಿ. ದಾವಾ ಆಸ್ತಿಗಳಲ್ಲಿ ನಾನು ಚನ್ನವೀರಮ್ಮ ಮತ್ತು ದೇವಿರಮ್ಮನ ಪಾಲಿನ ಆಸ್ತಿಗಳನ್ನು ಸೇರಿಸಿಲ್ಲಾ ಎಂದರೆ ಸರಿ. ದಿನಾಂಕ 19.01.1984 ರಲ್ಲಿ ಪಾಲು ವಿಭಾಗ ಆದಾಗ ಚನ್ನವೀರಮ್ಮ ಸೌಭಾಗ್ಯಮ್ಮ ದೇವಿರಮ್ಮನ ಪಾಲಿನ ಆಸ್ತಿಗಳು ಅವರವರ ಹೆಸರಿಗೆ ಮ್ಯುಟೇಶನ್ ಆಗಿದೆ ಎಂದರೆ ಸರಿ. ಸೌಭಾಗ್ಯಮ್ಮನ ಪಾಲಿನ ಆಸ್ತಿಗಳನ್ನು ಸಹ ದೇವಿರಮ್ಮ ಮತ್ತು ಅವರ ಮಗಳು ಅಳಿಯ ಸಾಗುವಳಿ ಮಾಡುತ್ತಿದ್ದರು ಎಂದರೆ ಸರಿಯಲ್ಲ. ದಿನಾಂಕ 04.03.1994 ರಂದು ಚನ್ನ ವೀರಮ್ಮ ಮರಣ ಹೊಂದಿರುತ್ತಾರೆ ಎಂದರೆ ಸರಿ. ದಾವಾ ಆಸ್ತಿ ಸೌಭಾಗ್ಯಮ್ಮನಿಗೆ ಆಕೆಯ ತವರು ಮನೆಯಿಂದ ಬಂದ ಸ್ತ್ರೀಧನ ಸ್ವತ್ತು ಎಂದರೆ ಸರಿ. ಗುರುಬಸ್ಸಯ್ಯನ ಕಡೆಯಿಂದ ಬಂದಂತಹ ಆಸ್ತಿಗಳು ಅಲ್ಲಾ ಎಂದರೆ ಸರಿ. ಸೌಭ್ಯಾಮ್ಮನಿಗೆ ಮಕ್ಕಳು ಇಲ್ಲದಿದ್ದ ಕಾರಣ ಆಕೆ ಜೀವಂತ ಇದ್ದ ಸಮಯದಲ್ಲಿ ಅಕ್ಕನ ಮಕ್ಕಳಾದ ವಾದಿಗಳನ್ನೆ ತನ್ನ ಮಕ್ಕಳಂತೆ ಭಾವಿಸಿಕೊಂಡಿದ್ದರು ಎಂದರೆ ಸರಿಯಲ್ಲ. ಸೌಭಾಗ್ಯಮ್ಮ ವಾದಿಗಳ ಮದುವೆಯನ್ನು ಮತ್ತು ಇತರೆ ಕಾರ್ಯಕ್ರಮ ಮಾಡಿದ್ದರು ಎಂದರೆ ಸರಿಯಲ್ಲ. ವಾದಿಗಳೊಂದಿಗೆ ಸೌಭಾಗ್ಯಮ್ಮ ತನ್ನ ಅಂತಿಮ ದಿನಗಳನ್ನು ಕಳೆದರು ಎಂದರೆ ಸರಿಯಲ್ಲ. ಸೌಭಾಗ್ಯಮ್ಮ ವಾದಿಗಳನ್ನೆ ಮಕ್ಕಳೆಂದು ತಿಳಿದುಕೊಂಡ ಕಾರಣ ಆಕೆಯ ಸ್ತ್ರೀಧನ ಸ್ವತ್ತುಗಳನ್ನು ದಿನಾಂಕ 17.02.2006 ರಂದು ಆಕೆಯ ಭಾಗದ ಸ್ವತ್ತುಗಳನ್ನು ವಾದಿಯರಿಗೆ ಜಂಟಿ ಆಗಿ ನೋಂದಾದ ಮೃತ್ಯು ಪತ್ರದ ಮುಖಾಂತರ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ವಾದಿಗಳ ತಾಯಿ 1994 ರಲ್ಲಿ ಮೃತ ಪಟ್ಟ ನಂತರ ಚನ್ನವೀರಮ್ಮ ಸೌಭಾಗ್ಯಮ್ಮ ದೇವಿರಮ್ಮನ ಪಾಲಿನ ಆಸ್ತಿಗಳನ್ನು

ವಾದಿಯರೇ ಸಾಗುವಳಿ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ಸೌಭಾಗ್ಯಮ್ಮ ದಿನಾಂಕ 10.01.2010 ರಂದು ವಾದಿಗಳನ್ನು ಆಕೆಯ ಕಾನೂನು ಬದ್ಧ ವಾರಸುದಾರರನ್ನು ಬಿಟ್ಟು ಮರಣ ಹೊಂದಿರುತ್ತಾರೆ ಎಂದರೆ ಸರಿಯಲ್ಲ. ದಿನಾಂಕ 17.02.2006 ರಂದು ಆದ ವಿಲ್ ಆಧಾರದ ಮೇಲೆ ವಾದಿಗಳು ವಿಲ್ ಮುಖಾಂತರ ಬಂದ ಆಸ್ತಿಗಳನ್ನು ಅನುಭವಿಸುತ್ತಿದ್ದಾರೆ ಎಂದರೆ ಸರಿಯಲ್ಲ. ಸೌಭಾಗ್ಯಮ್ಮ ಮತ್ತು ದೇವಿರಮ್ಮ ಚನ್ನವೀರಮ್ಮ ರವರ ನಡುವೆ ಯಾವುದೇ ವಿವಾದ ಇಲ್ಲದಿದ್ದ ಕಾರಣ ಮೊದಲಿನಿಂದ ಎಲ್ಲರೂ ಜಂಟಿ ಆಗಿ ಆಸ್ತಿಗಳನ್ನು ಅನುಭವಿಸುತ್ತಿದ್ದರು ಎಂದರೆ ಸರಿಯಲ್ಲ. ವಾದಿಯರೇ ಮೃತ ಸೌಭಾಗ್ಯಮ್ಮನ ಕಾನೂನು ಬದ್ಧ ವಾರಸುದಾರರು ಎಂದರೆ ಸರಿಯಲ್ಲ. ಸೌಭಾಗ್ಯಮ್ಮನಿಗೆ ವಾದಿಯರೇ ಹತ್ತಿರದ ವಾರಸುದಾರರು ಎಂದರೆ ಸರಿಯಲ್ಲ. ಸೌಭಾಗ್ಯಮ್ಮ ಚನ್ನವೀರಮ್ಮ ಅವರ ತಾಯಿಗೆ ಒಂದನೇ ವರ್ಗದ ವಾರಸುದಾರರು ಎಂದರೆ ಸರಿ. ವಾದಿಗಳು ಸೌಭಾಗ್ಯಮ್ಮನ ದೇವಿರಮ್ಮ ಮತ್ತು ಚನ್ನವೀರಮ್ಮನ ಭಾಗದ ಎಲ್ಲಾ ಆಸ್ತಿಗಳನ್ನು ಅನುಭವಿಸುತ್ತಿದ್ದು ಅವರೇ ನೇರ ವಾರಸುದಾರರು ಎಂದರೆ ಸರಿಯಲ್ಲ. ಗುರುಬಸ್ಸಯ್ಯನ ವಿರುದ್ಧ ಕೆಳ ನ್ಯಾಯಾಲಯದಲ್ಲಿ ವಾದಿಯರು ದಾವಾ ಹೂಡಿದ್ದರು ಎಂದರೆ ಸರಿ. ಸದರಿ ದಾವೆ ಓ ಎಸ್ ನಂಬರ 25/2013 ಅಂತಾ ನೋಂದಣಿ ಆಗಿದೆ ಎಂದರೆ ಸರಿ. ನಿ ಡಿ 1, ನಿ ಡಿ 2, ನಿ ಡಿ 3 ಆ ದಾವೆಯ ಆದೇಶ ಪುಟ, ವಾದ ಪತ್ರ, ಪ್ರತಿವಾದ ಪತ್ರ ನಾನೇ ಹಾಜರುಪಡಿಸಿರುತ್ತೇನೆ ಎಂದರೆ ಸರಿ. ಓ ಎಸ್ ನಂಬರ 25/2013 ರಲ್ಲಿ ಗುರುಬಸ್ಸಯ್ಯ ನವರು ದಿನಾಂಕ 17.02.2006 ರಂದು ಆದ ವಿಲ್ ಆಧರಿಸಿ ಅವರನ್ನೆ ಮಾಲೀಕರು ಅಂತಾ ಘೋಷಣೆ ಮಾಡಬೇಕು ಅಂತಾ ಕೇಳಿಕೊಂಡಿದ್ದರು ಎಂದರೆ ಸರಿ. ಗುರುಬಸ್ಸಯ್ಯ ಸದರಿ ದಾವೆಯಲ್ಲಿ ನ್ಯಾಯಾಲಯಕ್ಕೆ ಹಾಜರಾಗಿ ಪ್ರತಿವಾದ ಪತ್ರ ಸಲ್ಲಿಸಿರುತ್ತಾರೆ ಎಂದರೆ ಸರಿ. ಸದರಿ ಪ್ರತಿವಾದ

ಪತ್ರದಲ್ಲಿ ಗುರುಬಸ್ಸಯ್ಯ ದಾವಾ ಆಸ್ತಿಗಳೆಲ್ಲವೂ ಸೌಭಾಗ್ಯಮ್ಮನ ತವರು ಮನೆ ಆಸ್ತಿ ಅಂತಾ ತಿಳಿಸಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಪ್ರತಿವಾದ ಪತ್ರದಲ್ಲಿ ಸೌಭಾಗ್ಯಮ್ಮ ದೇವಿರಮ್ಮನ ಮಕ್ಕಳು ಗುರುಬಸ್ಸಯ್ಯ ಅಂತಾ ಒಪ್ಪಿಕೊಂಡಿರುತ್ತಾರೆ ಎಂದರೆ ಸರಿ. ದಿನಾಂಕ 19.01.1984 ರಲ್ಲಿ ಪಾಲು ವಿಭಾಗ ಆಗಿದ್ದು ದಾವಾ ಆಸ್ತಿಗಳು ಸೌಭಾಗ್ಯಮ್ಮನ ಪಾಲಿಗೆ ಬಂದಿದೆ ಅಂತಾ ಒಪ್ಪಿಕೊಂಡಿರುತ್ತಾರೆ ಎಂದರೆ ಸರಿ. ಗುರುಬಸ್ಸಯ್ಯ ಸಲ್ಲಿಸಿದ ಪ್ರತಿವಾದ ಪತ್ರದಲ್ಲಿ ವಾದಿ ಮತ್ತು ಅವರ ಕುಟುಂಬದ ವಿರುದ್ದ ಪಾಲು ವಿಭಾಗದ ದಾವೆ ಸಲ್ಲಿಸುತ್ತೇನೆ ಅಂತಾ ಹಕ್ಕುಯನ್ನು ಕಾಯ್ದಿರಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಗುರುಬಸ್ಸಯ್ಯ ಜೀವಂತ ಇದ್ದ ಕಾಲದಲ್ಲಿ ವಾದಿ ಅಥವಾ ಅವರ ಕುಟುಂಬದ ವಿರುದ್ಧ ಯಾವುದಾದರೂ ಒಂದು ಪ್ರಕರಣ ದಾಖಲಿಸಿದ್ದರು ಅಂತಾ ನನಗೆ ಗೊತ್ತಿಲ್ಲಾ. ನಿ ಡಿ 3 ಪ್ರತಿವಾದ ಪತ್ರವನ್ನು ಗುರುಬಸ್ಸಯ್ಯ 2013 ರಲ್ಲಿ ದಾಖಲಿಸಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಪ್ರಕರಣದಲ್ಲಿ ನಾನು ದಿನಾಂಕ 28.12.2011 ರಂದು ಟಿ ಎಂ ಗುರುಬಸ್ಸಯ್ಯ ನವರು ವಿಲ್ ಮುಖಾಂತರ ಹಸ್ತಾಂತರ ಮಾಡಿರುತ್ತಾರೆ ಅಂತಾ ಬರೆಸಿರುತ್ತೇನೆ ಎಂದರೆ ಸರಿ. ನಿ ಡಿ 3 ಪ್ರತಿವಾದ ಪತ್ರದಲ್ಲಿ ದಿನಾಂಕ 28.12.2011 ರಂದು ದಾವಾ ಆಸ್ತಿಗಳನ್ನು ವಿಲ್ ಆಧಾರದ ಮೇಲೆ ನಿಮಗೆ ಮತ್ತು ಸಹೋದರಿಯರಿಗೆ ಹಸ್ತಾಂತರ ಮಾಡಿರುತ್ತೇನೆ ಅಂತಾ ತಿಳಿಸಿಲ್ಲಾ ಎಂದರೆ ಸರಿ.

**(ವಾದಿ ಪರ ವಕೀಲರು ಮುಂದುವರಿದ ಪಾಟೀ ಸವಾಲಿಗೆ ಸಮಯ ಕೋರಿದ್ದು ಅನುಮತಿಸಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದಂತೆ ಗಣಕೀಕೃತ ಗೊಳಿಸಲಾಯಿತು.)

ಓ ಹೇ ಕೇ ಸರಿ ಇದೆ.

ಹಿರಿಯ ಸಿವಿಲ್ ಮತ್ತು ಜೆ ಎಂ ಎಫ್ ಸಿ
ನ್ಯಾಯಾಧೀಶರು, ಹರಪನಹಳ್ಳಿ.